ನಂತರ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು

ಊ) ಪುರಸಭೆಯ ಸಮಗ್ರ ಅಭಿವೃದ್ದಿ ನೀಲಿ ನಕ್ಷೆಯನ್ನು ತಯಾರಿಸಲು ಸೂಚನೆ ನೀಡಲಾಗಿದೆ

317 (342) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಎಸ್ಆರ್‌ಟಿಸಿ ಹಾಸನ ಹಾಗೂ ಚಿಕ್ಕ ಮಗಳುರು ವಿಭಾಗಗಳಲ್ಲಿರುವ ಹಾಲಿ ಡಿಪೋಗಳ ಸಂಖ್ಯೆ ಎಷ್ಟು ಹಾಗೂ ಸದರಿ ಡಿಪೋಗಳಲ್ಲಿರುವ ಬಸ್ಸುಗಳ ಹಾಗೂ ಚಾಲಕ ನಿರ್ವಾಹಕರ ಸಂಖ್ಯೆ ಎಷ್ಟು, (ವಿವರ ನೀಡುವುದು),

ಆ) ಈ ವಿಭಾಗಗಳ ವ್ಯಾಪ್ತಿಯಲ್ಲಿ ಇನ್ನೂ ಹೊಸದಾಗಿ ಬಸ್ ಡಿಪೋ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ, ಹಾಗಿದ್ದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗುವುದು, (ವಿವರ ನೀಡುವುದು),

ಇ) ಈ ವೈಕಿ ಸದರಿ ಡಿಪೋಗಳಿಗೆ ಹೊಸದಾಗಿ ಎಷ್ಟು ಬಸ್ಸುಗಳನ್ನು ಒದಗಿಸಲಾಗುವುದು, (ಡಿಪೋಗಳವಾರು ವಿವರ ಒದಗಿಸುವುದು),

ಈ) ಇವುಗಳ ವ್ಯಾಪ್ತಿಯ ಬಸ್ ನಿಲ್ದಾಣದ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ, ಹಾಗೂ ಹೊಸ ಬನ್ ನಿಲ್ದಾಣಗಳನ್ನು ಸ್ಥಾಪಿಸಲು ಉದ್ದೇಶಿಸಿದೆಯೇ,

ಉ) ಮೇಲಿನ ವಿಭಾಗಗಳ ಎಲ್ಲಾ ಡಿಪೋಗಳ ಮೂಲಕ ವಹಿವಾಟು ಆದಾಯ-ಖರ್ಚುಗಳೆಷ್ಟು, (ವಿವರ ನೀಡುವುದು),

ಊ) ಕಲೆಕ್ಷನ್ ಕಡಿಮೆಯಾದರೆ ಹಾಗೂ ಬಸ್ಸಿಗೆ ಹೆಚ್ಚು ಡೀಸಲ್ ಖರ್ಚಾದರೆ ಬನ್ ನಿರ್ವಾಹಕರ ಹಾಗೂ ಚಾಲಕರ ಮೇಲೆ ದಂಡ ವಿಧಿಸುವ ಕ್ರಮ ಸರಿಯೇ,

ಋ) ಮಹಿಳಾ ನಿರ್ವಾಹಕಿಯರಿಗೆ ಹೆರಿಗೆ ರಜಾ ಸೌಲಭ್ಯ ಕಲ್ಪಿಸಲಾಗಿದೆಯೇ,

ಋೂ) ಹಾಗಿಲ್ಲದಿದ್ದಲ್ಲಿ ಆದಕ್ಕೆ ಕಾರಣವೇನು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹಾಸನ ಮತ್ತು ಚಿಕ್ಕಮಗಳೂರು ವಿಭಾಗಗಳಲ್ಲಿ ತಲಾ 5 ಘಟಕಗಳಿವೆ

ಸದರಿ ಡಿಪೋಗಳಲ್ಲಿರುವ ಬಸ್ಸುಗಳು ಹಾಗೂ ಚಾಲಕ ಹಾಗೂ ನಿರ್ವಾಹಕ ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ

ಆ) ಹಾಸನ ವಿಭಾಗದ ಹಾಸನದಲ್ಲಿ 2ನೇ ಬಸ್ ಘಟಕ ಹಾಗೂ ಚಿಕ್ಕಮಗಳೂರು ವಿಭಾಗದಲ್ಲಿ ಬೇಲೂರು ಮತ್ತು ಕೊಪ್ಪದಲ್ಲಿ ಬಸ್ ಘಟಕಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ನಿವೇಶನಗಳನ್ನು ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ

ಇ) ಪ್ರಾರಂಭದಲ್ಲಿ ತಲಾ 10 ಹೊಸ ಬಸ್ಸುಗಳನ್ನು ನೀಡಲಾಗುವುದು

ಈ) 1) ಹಾಸನ ವಿಭಾಗದಲ್ಲಿ ಚನ್ನರಾಯಪಟ್ಟಣ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಕೆಲಸಗಳು ಪೂರ್ಣಗೊಳ್ಳುವ ಹಂತದಲ್ಲಿದೆ

2) ಹಾಸನ ವಿಭಾಗದ ಹಾಸನ ಪಟ್ಟಣದಲ್ಲಿ ನೂತನ ಬಸ್ ನಿಲ್ದಾಣವನ್ನು 20 15 ಕೋಟಿ ರೂ,ಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದ್ದು, ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ

3) ದಿಡಗದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ ನಿವೇಶನಗಳನ್ನು ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ

4) ಚಿಕ್ಕಮಗಳೂರು ವಿಭಾಗದಲ್ಲಿ ಮೂಡಿಗೆರೆ ಸಕಲೇಶಪುರ, ಅರಸೀಕರೆ ಮತ್ತು ಚಿಕ್ಕಮಗಳೂರು ಈ 5 ಕಡೆ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಿದ್ದು ಕಾಮಗಾರಿ ಕೆಲಸಗಳು ಪ್ರಸ್ತುತ ಪ್ರಗತಿಯಲ್ಲಿರುತ್ತವೆ

5) ಚಿಕ್ಕಮಗಳೂರು ವಿಭಾಗದಲ್ಲಿ ಸದ್ಯಕ್ಕೆ ಯಾವುದೇ ಹೊಸ ಬಸ್ ನಿಲ್ದಾಣ ನಿರ್ಮಾಣದ ಪ್ರಸ್ತಾವನೆ ಇರುವುದಿಲ್ಲ

ಉ) ಹಾಸನ ಮತ್ತು ಚಿಕ್ಕಮಗಳೂರು ವಿಭಾಗದ ಎಲ್ಲಾ ಘಟಕಗಳ 2005–06ನೇ ಸಾಲಿನ ವಾರ್ಷಿಕ ವಹಿವಾಟು ಆದಾಯ–ವೆಚ್ಚಗಳ ವಿವರವನ್ನು ಅನುಬಂಧ–ಬಿ ನಲ್ಲಿ ಒದಗಿಸಲಾಗಿದೆ

ಊ) ಸಂಸ್ಥೆಯ ಹಿತದೃಷ್ಟಿಯಿಂದ ಆದಾಯ ಕಡಿಮೆ ತರುವ ನಿರ್ವಾಹಕರಿಗೆ ದಂಡ ವಿಧಿಸಲಾಗುತ್ತದೆ ಅಂತೆಯೇ ಚಾಲಕರ ಕ್ರಮಬದ್ಧವಲ್ಲದೆ ಚಾಲನಾ ಕ್ರಮದಿಂದ ನಿಗದಿತ ಗುರಿಗಿಂತ ಹೆಚ್ಚು ಡೀಸೆಲ್ ವ್ಯಯಮಾಡುವ ಚಾಲಕರ ಮೇಲೆ ಬಂಡ ವಿಧಿಸುವ ಕ್ರಮ ಜಾರಿಯಲ್ಲಿರುತ್ತದೆ

ಋ) ಕಲ್ಪಿಸಲಾಗಿದೆ

ಖಂ) ಉದ್ಭವಿಸುವುದಿಲ್ಲ

ANNEXURE-A

Statement showing the details of buses held and crew working in Hassan & Chikmagalur Divisionas on 27-1-2007

Number of Buses held in Hassan Division

Sl No	Depot	No of Buses held
1	Hassan	152
2	Channarayapatna	107
3	Holenarasipura	80
4	Ramanathapura	72
5	Arkalgud	67
	Total	478

Number of crew working in Hassan Division

Depot	Drivers			Conductors			Driver-Cum-Conductors		
	Regular	Trai-nee	Total	Regular	Trai-nee	Total	Regular	Trai-nee	Total
Hassan	214	42	256	112	60	172	38	28	66
Channaraya Patna	140	16	156	90	18	108	23	23	46
Ramanatha pura	74	25	99	50	03	53	19	26	45
Holenarasipura	90	23	113	38	16	54	24	33	57
Arakalgud	74	22	96	16	15	31	26	45	71
Total	592	128	720	307	112	418	130	155	285

Number of Buses held in Chickmagalur Division

	Depot	No of Buses held
1	Chickmagalur	129
2	Arasikere	111
3	Sakaleshpura	104
4	Kadur	57
5	Mudigere	43
	Total	444

Number of crew working in Chickmagalur Division

Depot	Drivers			Conductors			Driver-Cum-Conductors		
	Regular	Trai-nee	Total	Regular	Trai-nee	Total	Regular	Trai-nee	Total
Chickmagalur	147	28	175	131	18	14955	55	46	101
Arasikere	109	48	157	77	29	106	20	42	62
Sakaleshpura	80	61	141	691	35	104	27	38	65
Kadur	40	28	68	31	28	59	14	33	47
Mudigere	32	29	61	23	3053	53	08	30	38
Total	408	194	602	331	140	471	124	189	313

ANNEXURE "B"

Statement showing the details is of Division/Depotwise Revenue, Cost and Prof/Loss of Hassan and Chikkamagalore Division for the year 2005-06

(Rs in lakh)

Depot	Gross Revenue	Cost	Profit/Loss
Hassan Division			
a) Hassan	2948 46	2779 49	168 97
b) Channarayapatna	1848 03	1852 44	4 41
c) Ramanathapura	1233 22	1160 55	72 67
d) Holenarispura	1400 39	1338 22	62 17
e) Arkalgudu	1082 83	1032 82	50 01
Total	8512 93	8163 52	349 41
Chikkamagalore Division			
a) Chikkamagalore	2998 03	2842 98	155 05
b) Arasikere	2020 05	1955 34	64 71
c) Sakalespura	1946 06	1834 04	112 02
d) Kadur	918 22	873 03	45 19
e) Mudigere	136 32	128 83	7 49
Total	8018 68	7634 22	384 46

318 (342) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಸ್ವಯಂ ಉದ್ಯೋಗ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ಮಂಜೂರಾತಿ ನೀಡಲಾಗಿದೆ, (ತಾಲ್ಲೂಕುವಾರು ವಿವರ ನೀಡುವುದು),